ಅಧ್ಯಕ್ಷರು :– ಪ್ರಸ್ತಾವ ಏನೆಂದರೆ, "2006 ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಅನುಬಂಧ – 3)

(ಈ ಹಂತದಲ್ಲಿ ಸರ್ಕಾರದ ಧೋರಣೆಯನ್ನು ಪ್ರತಿಭಟಿಸುತ್ತಾ, ಕಾಂಗ್ರೆಸ್ಸಿನ ಮಾನ್ಯ ಸದಸ್ಯರುಗಳು ಸನ್ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು :– ಈಗ ಸದನವನ್ನು 3 : 30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 : 24 ಗಂಟೆಗೆ ಮುಕ್ತಾಯಗೊಂಡು, ಪುನಃ 3 : 30 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(3 : 30)

(ಸದನವು ಪುನಃ 3 : 47 ಗಂಟೆಗೆ ಸಮಾವೇಶಗೊಂಡಿತು)

ಮಾನ್ಯ ಉಪಾಧ್ಯಕ್ಷರು ಪೀಠದಲ್ಲಿ ಉಪಸ್ಥಿತರಿದ್ದರು.

8. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ :

ವಿಷಯ :– ಇನ್‌ಫೋಸಿಸ್ ನಾರಾಯಣ ಮೂರ್ತಿಯವರ ಪರವಾಗಿ ಶ್ರೀ ಎಸ್.ಎಲ್. ಭೈರಪ್ಪನವರು ಮಾತನಾಡಿರುವ ಬಗ್ಗೆ :

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಉಪಾಧ್ಯಕ್ಷರೆ, ಒಂದು ಪ್ರಮುಖವಾದಂತಹ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಈ ಸದನದಲ್ಲಿ ಶ್ರೀಮಾನ್.....

ಉಪಾಧ್ಯಕ್ಷರು :– ಯಾವ ವಿಷಯವು ತಾವು ಪ್ರಸ್ತಾಪ ಮಾಡುತ್ತಿದ್ದೀರಿ?

ಶ್ರೀ ವಾಟಾಳ್ ನಾಗರಾಜ್ :– ನಾರಾಯಣ ಮೂರ್ತಿಯವರು.....

ಉಪಾಧ್ಯಕ್ಷರು :– ಮಾನ್ಯ ಎಂ.ಪಿ. ಪ್ರಕಾಶ್‌ರವರು ಬರಲಿ. ಆಗ ಆ ವಿಚಾರ ಮಾತನಾಡುವಿರಂತೆ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಉಪಾಧ್ಯಕ್ಷರೇ, ದಯಮಾಡಿ ಒಂದು ನಿಮಿಷ ಅವಕಾಶ ಮಾಡಿಕೊಡಿ. ನಿನ್ನೆ ದಿವಸ ಗೃಹ ಮಂತ್ರಿಗಳಾದ ಮಾನ್ಯ ಪ್ರಕಾಶ್‌ರವರು ಈ ಸದನದ ಮುಂದೆ ನಾವು ವರದಿಯನ್ನು ಮಂಡಿಸುತ್ತೇವೆಂದು ಹೇಳಿದ್ದರು. ನಾವು ಇವತ್ತು ಬೆಳಿಗ್ಗೆ ಮಂಡಿಸಬಹುದು ಎಂದು ಕಾದಿದ್ದೆವು. ಅವರು ವರದಿಯನ್ನು ಮಂಡಿಸಿಲ್ಲ ಮತ್ತು ಸದನಕ್ಕೆ ಯಾವತ್ತು ಮಂಡಿಸುತ್ತೇವೆಂದು ಹೇಳಿಲ್ಲ ನಾಳೆ ದಿವಸ ಸದನ ಮುಗಿಯುತ್ತಿರುವುದು ತಮಗೆ ಗೊತ್ತಿದೆ, ನಮಗೂ ಗೊತ್ತಿದೆ ನಿನ್ನೆ ಮಂಡಿಸುತ್ತೇವೆಂದು ಹೇಳಿದ ಮೇಲೆ ಇವತ್ತು ಅವರು ವರದಿಯನ್ನು ಮಂಡಿಸಬೇಕಾಗಿತ್ತು. ಈ ಮಧ್ಯೆ ಅನೇಕ ದ್ವಂದ್ವವಾದಂತಹ ಹೇಳಿಕೆಗಳನ್ನು ನೀಡಲಾಗುತ್ತಿದೆ. ನಮ್ಮೆಲ್ಲರನ್ನೂ ಒಂದು ತರಹ ನೋಡಲಾಗುತ್ತಿದೆ, ರಾಜಕಾರಣಿಗಳ ಸ್ವಾರ್ಥಕ್ಕೋಸ್ಕರವಾಗಿ ಇದನ್ನು ಪ್ರಸ್ತಾಪ ಮಾಡಿದ್ದಾರೆ ಎಂದು ಒಬ್ಬ ಹಿರಿಯ ಸಾಹಿತಿಗಳು ಹೇಳಿದ್ದಾರೆ. ಅವರ ಬಗ್ಗೆ ನನಗೆ ಬಹಳ ಗೌರವವಿದೆ. ಭೈರಪ್ಪನವರ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಅವರ ಬಗ್ಗೆ ನನಗೆ ಎರಡನೆ ಅಭಿಪ್ರಾಯವೇನೂ ಇಲ್ಲವೇ ಇಲ್ಲ. ಅವರ ಬರವಣಿಗೆ ಬಗ್ಗೆ ಮತ್ತು ಅವರ ಬಗ್ಗೆ ನನಗೆ ಗೌರವವಿದೆ. ಆದರೆ ಅವರು ಈ ವಿಚಾರದಲ್ಲಿ ಅವರು ಏಕೆ ಮಧ್ಯೆ ಬಾಯಿ ಹಾಕಿದರು ಎಂದು ನನಗೆ ಗೊತ್ತಾಗಲಿಲ್ಲ. ನಾರಾಯಣಮೂರ್ತಿಯವರ ಪರ ಏ ನಿಂತರು ಎಂದು ನನಗೆ ಇನ್ನೂ ಅರ್ಥವಾಗುತ್ತಿಲ್ಲ. ನಾರಾಯಣಮೂರ್ತಿಯವರ ಪರವಾಗಿ ಅವರು ನಿಲ್ಲುವುದಕ್ಕೆ ಕಾರಣವೇನು? ಶಾಸನ ಸಭೆ ಸದಸ್ಯರುಗಳ ಮೇಲೆ ಒಂದು ರೀತಿ ಕೆಟ್ಟ ಪರಿಣಾಮ ಬರುವ ರೀತಿಯಲ್ಲಿ ಅವರ ಹೇಳಿಕೆ ಇವತ್ತು ಬಂದಿದೆ. ಅದು ಸರಿಯಾದ ಕ್ರಮವಲ್ಲ. ಹಿಂದೆಯೂ ಅವರು ಹೇಳಿದ್ದರು, ಅದನ್ನ ಬಿಡಿ. ಅವರು ಆ ಟಿಪ್ಪುಸುಲ್ತಾನ್ ಬಗ್ಗೆ ವಾದ ಮಾಡಿದ್ದರು, ಅದು ಬೇರೆಯದ್ದ ಆದ ವಿಚಾರ. ಇವತ್ತು ನಾರಾಯಣ ಮೂರ್ತಿಯವರ ಬಗ್ಗೆ ನಾವು ಸುಮ್ಮ ಕುಳಿತುಕೊಳ್ಳಲಾಗುವುದಿಲ್ಲ.

ಉಪಾಧ್ಯಕ್ಷರು :– ಎಂ.ಪಿ. ಪ್ರಕಾಶ್‌ರವರು ಬಂದಾಗ ಮಾತನಾಡೋಣ ಈಗ ಏತಕ್ಕೆ?, ಸಬ್ಜೆಕ್ಟ್ ಮುಂದುವರೆಯಲಿ, ದಯವಿಟ್ಟು ಚರ್ಚೆ ಮಾಡಬೇಡಿ ಕುಳಿತುಕೊಳ್ಳಿ, ಈಗ ವಿಧೇಯಕಗಳನ್ನು ತೆಗೆದುಕೊಳ್ಳೋಣ.